# ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ಮಾಧ್ಯಮ: ಪರಿವರ್ತನೆ, ಪ್ರಭಾವ ಮತ್ತು ಸಮ್ಮಿಲನ

**ರೇಣುತಾಕ್ಷಿ***

**DOI: https://doi.org/10.5281/zenodo.22107387**

**ABSTRACT**

ಕನ್ನಡದ ಸಾಂಸ್ಕೃತಿಕ ಪರಂಪರೆಯಲ್ಲಿ ರಂಗಭೂಮಿ ಮತ್ತು ಚಲನಚಿತ್ರ ಮಾಧ್ಯಮಗಳು ಅತ್ಯಂತ ಪ್ರಭಾವಶಾಲಿ ದೃಶ್ಯ-ಶ್ರಾವ್ಯ ಮಾಧ್ಯಮಗಳಾಗಿ ಕಾರ್ಯನಿರ್ವಹಿಸಿವೆ. 19ನೇ ಶತಮಾನದ ಉತ್ತರಾರ್ಧದಲ್ಲಿ ವೃತ್ತಿ ರಂಗಭೂಮಿಯಿಂದ ಆರಂಭಗೊಂಡು ನಂತರದ ಶ್ರೇಷ್ಠ ಹವ್ಯಾಸಿ ರಂಗಭೂಮಿ ಚಳವಳಿಯವರೆಗೆ ಕನ್ನಡ ರಂಗಕ್ಷೇತ್ರವು ಸಾಮಾಜಿಕ, ರಾಜಕೀಯ ಮತ್ತು ವೈಚಾರಿಕ ಜಾಗೃತಿಗೆ ಪ್ರಮುಖ ವೇದಿಕೆಯಾಯಿತು. 1934ರ 'ಸತಿ ಸುಲೋಚನ' ಚಿತ್ರದೊಂದಿಗೆ ಆರಂಭವಾದ ಕನ್ನಡ ಚಿತ್ರರಂಗವು ತನ್ನ ಆರಂಭಿಕ ದಿನಗಳಲ್ಲಿ ರಂಗಭೂಮಿಯ ಕಥೆಗಳು, ನಟರು, ತಂತ್ರಜ್ಞರು ಮತ್ತು ರಂಗಶೈಲಿಯನ್ನೇ ನೆಚ್ಚಿಕೊಂಡಿತ್ತು. ಈ ಸಂಶೋಧನಾ ಪ್ರಬಂಧವು ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ಮಾಧ್ಯಮಗಳ ನಡುವಿನ ಪರಸ್ಪರ ಸಂಬಂಧ, ಸಮ್ಮಿಲನ ಮತ್ತು ಅವುಗಳು ಕಾಲಘಟ್ಟಕ್ಕೆ ತಕ್ಕಂತೆ ರೂಪಿಸಿಕೊಂಡ ಸ್ವತಂತ್ರ ಮಾಧ್ಯಮ ಭಾಷೆಯನ್ನು ವಿಶ್ಲೇಷಿಸುತ್ತದೆ.

ವೃತ್ತಿ ರಂಗಭೂಮಿಯ ಗುಬ್ಬಿ ವೀರಣ್ಣ ಕಂಪನಿಯಂತಹ ಸಂಸ್ಥೆಗಳು ಸಿನಿಮಾ ಮಾಧ್ಯಮಕ್ಕೆ ನೀಡಿದ ಕೊಡುಗೆ ಅಪಾರ. ಡಾ॥ ರಾಜ್‌ಕುಮಾರ್, ಜಿ.ವಿ. ಅಯ್ಯರ್, ಮಾಸ್ಟರ್ ಹಿರಣ್ಣಯ್ಯ ಅವರಂತಹ ಪ್ರಮುಖ ನಟ-ನಿರ್ದೇಶಕರು ರಂಗಭೂಮಿಯಿಂದ ಬೆಳೆದು ಚಿತ್ರರಂಗವನ್ನು ಸಮೃದ್ಧಗೊಳಿಸಿದರು. 1970ರ ದಶಕದ 'ನವ್ಯ' ಸಾಹಿತ್ಯ ಚಳವಳಿಯ ಪ್ರಭಾವದಿಂದ ಜನ್ಮತಾಳಿದ 'ಸಮಾಂತರ ಸಿನಿಮಾ' (ಅಲೆಮಾರಿ/ ಪ್ರಾಯೋಗಿಕ ಚಿತ್ರಗಳು) ರಂಗಭೂಮಿ ಮತ್ತು ಸಿನಿಮಾವನ್ನು ಮತ್ತಷ್ಟು ಹತ್ತಿರಕ್ಕೆ ತಂದಿತು. ಬಿ.ವಿ.ಕಾರಂತ, ಗಿರೀಶ್ ಕಾರ್ನಾಡ್, ಯು.ಆರ್. ಅನಂತಮೂರ್ತಿ, ಕೆ.ವಿ. ಸುಬ್ಬಣ್ಣ ಅವರಂತಹ ದಿಗ್ಗಜರು ಹವ್ಯಾಸಿ ರಂಗಭೂಮಿಯ ಸೌಂದರ್ಯಮೀಮಾಂಸೆಯನ್ನು ಬೆಳ್ಳಿಪರದೆಗೆ ಯಶಸ್ವಿಯಾಗಿ ಅಳವಡಿಸಿದರು.

**KEYWORDS:** ಕನ್ನಡ ರಂಗಭೂಮಿ, ಕನ್ನಡ ಚಲನಚಿತ್ರ, ಸಮಾಂತರ ಸಿನಿಮಾ, ಗುಬ್ಬಿ ಕಂಪನಿ, ಪ್ರಾಯೋಗಿಕ ಕಥನ.

* **ರೇಣುತಾಕ್ಷಿ ,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್ಮೆಂಟ್, ಮಂಗಳೂರು.

**ಪೀಠಿಕೆ:**

ಕಲೆಯನ್ನು ಕೇವಲ ಮನರಂಜನೆಯ ಸಾಧನವಾಗಿ ನೋಡದೆ, ಸಮಾಜದ ಸಾಂಸ್ಕೃತಿಕ ಚೇತನ, ವೈಚಾರಿಕ ಪರಿವರ್ತನೆ ಮತ್ತು ಸಮಾಜದ ಆಂತರಿಕ ದ್ವಂದ್ವಗಳನ್ನು ಪ್ರತಿಬಿಂಬಿಸುವ ಕನ್ನಡಿಯಾಗಿ ನೋಡಲಾಗುತ್ತದೆ. ಮಾನವ ಸಮುದಾಯವು ತನ್ನ ಭಾವನೆಗಳನ್ನು, ಕಥನಗಳನ್ನು ಮತ್ತು ಸಾಮಾಜಿಕ ವಿಮರ್ಶೆಗಳನ್ನು ಅಭಿವ್ಯಕ್ತಿಸಲು ಕಂಡುಕೊಂಡ ಅತ್ಯಂತ ಪ್ರಭಾವಶಾಲಿ ಮಾಧ್ಯಮಗಳೆಂದರೆ ದೃಶ್ಯ-ಶ್ರಾವ್ಯ ಕಲೆಗಳು. ಕರ್ನಾಟಕದ ಸಾಂಸ್ಕೃತಿಕ, ರಾಜಕೀಯ ಮತ್ತು ಸಾಮಾಜಿಕ ಇತಿಹಾಸದಲ್ಲಿ ರಂಗಭೂಮಿ ಹಾಗೂ ಚಲನಚಿತ್ರ ಮಾಧ್ಯಮಗಳು ಜಾಗೃತಿಯನ್ನು ಮೂಡಿಸುವಲ್ಲಿ ಮತ್ತು ಜನರ ಕಲ್ಪನಾಶಕ್ತಿಯನ್ನು ವಿಸ್ತರಿಸುವಲ್ಲಿ ಅನನ್ಯ ಹಾಗೂ ಐತಿಹಾಸಿಕ ಪಾತ್ರವನ್ನು ವಹಿಸಿವೆ.

ರಂಗಭೂಮಿಯು ತನ್ನ ಸ್ವರೂಪದಲ್ಲೇ ನೇರವಾದದ್ದು. ಅದು ಜೀವಂತ ನಟರು ರಂಗಸಜ್ಜಿಕೆ, ಬೆಳಕು ಮತ್ತು ಪ್ರೇಕ್ಷಕರ ನಡುವೆ ಕ್ಷಣಾರ್ಧದಲ್ಲಿ ಏರ್ಪಡುವ ಭಾವನಾತ್ಮಕ ಹಾಗೂ ವೈಚಾರಿಕ ಸಂವಹನ ಮಾಧ್ಯಮ. ರಂಗಮಂಚದ ಮೇಲಿನ ಪ್ರತಿಯೊಂದು ಪ್ರದರ್ಶನವೂ ತನ್ನದೇ ಆದ ವಿಶಿಷ್ಟ ಜೀವಂತಿಕೆಯನ್ನು ಹೊಂದಿರುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಚಲನಚಿತ್ರ ಮಾಧ್ಯಮವು ತಂತ್ರಜ್ಞಾನ, ಯಾಂತ್ರಿಕ ಪುನರುತ್ಪಾದನೆ ಮತ್ತು ಕಾಲ-ದೇಶಗಳ ಗಡಿಯನ್ನು ಮೀರಿ ಕೋಟ್ಯಾಂತರ ಜನರನ್ನು ತಲುಪುವ ಸಾಮರ್ಥ್ಯವಿರುವ ವಿಶಾಲ ಸಂವಹನ ಮಾಧ್ಯಮವಾಗಿದೆ.

ಭಾರತೀಯ ಹಾಗೂ ಕನ್ನಡದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ, ಸಿನಿಮಾ ಮಾಧ್ಯಮವು ಸ್ವತಂತ್ರವಾಗಿ ದಿಢೀರನೆ ಹುಟ್ಟಿಕೊಂಡದ್ದಲ್ಲ, ಬದಲಾಗಿ, ಅದು ರಂಗಭೂಮಿಯ ಉದರದಿಂದ ಜನ್ಮತಾಳಿದ ಮಾಧ್ಯಮ. 20ನೇ ಶತಮಾನದ ಆರಂಭದಲ್ಲಿ ಕನ್ನಡ ಚಲನಚಿತ್ರ ರಂಗವು ತನ್ನ ಶೈಶವಾವಸ್ಥೆಯಲ್ಲಿದ್ದಾಗ, ಅದಕ್ಕೆ ಅಗತ್ಯವಿದ್ದ ಮೂಲಸೌಕರ್ಯಗಳು, ಪೌರಾಣಿಕ ಹಾಗೂ ಐತಿಹಾಸಿಕ ಕಥಾವಸ್ತುಗಳು, ನಟನಾ ಅನುಭವ, ಸಂಗೀತ, ಸಂಭಾಷಣೆ ಮತ್ತು ತಂತ್ರಜ್ಞರನ್ನು ದಾನವಾಗಿ ನೀಡಿದ್ದು, ವೃತ್ತಿ ರಂಗಭೂಮಿ. ಹೀಗಾಗಿ ಕನ್ನಡ ಸಿನಿಮಾ ಕ್ಷೇತ್ರಕ್ಕೆ ರಂಗಭೂಮಿಯು ಕೇವಲ ಒಂದು ಹಿನ್ನೆಲೆಯಾಗಿರದೆ, ಅದರ 'ಮಾತೃಸಂಸ್ಥೆ' ಹಾಗೂ ಆಧಾರಸ್ತಂಭವಾಗಿ ಕಾರ್ಯನಿರ್ವಹಿಸಿತು.

ಕಾಲಕ್ರಮೇಣ, ಸಿನಿಮಾ ತನ್ನದೇ 'ಕ್ಯಾಮರಾ ಭಾಷೆ' ಹಾಗೂ ತಾಂತ್ರಿಕ ಸೌಂದರ್ಯ ಮೀಮಾಂಸೆಯನ್ನು ಕಂಡುಕೊಳ್ಳುತ್ತಾ ರಂಗಭೂಮಿಯ ಪ್ರಭಾವದಿಂದ ಬಿಡುಗಡೆ ಹೊಂದಲು ಯತ್ನಿಸಿತು. ಆದರೆ 1970ರ ದಶಕದ 'ನವ್ಯಸಾಹಿತ್ಯ ಚಳವಳಿ' ಹಾಗೂ 'ಸಮಾಂತರ ಸಿನಿಮಾ' ಕ್ರಾಂತಿಯ ವೇಳೆಗೆ, ಹವ್ಯಾಸಿ ರಂಗಭೂಮಿ ಮತ್ತು ಸಿನಿಮಾ ಮಾಧ್ಯಮಗಳು ಮತ್ತೆ ಒಂದಾಗಿ ಹೊಸ ಇತಿಹಾಸವನ್ನು ಬರೆದವು.

**ಐತಿಹಾಸಿಕ ಹಿನ್ನೆಲೆ: ರಂಗಭೂಮಿಯಿಂದ ಚಲನಚಿತ್ರದತ್ತ ಪಯಣ**

ಕನ್ನಡದ ದೃಶ್ಯಕಲಾ ಪರಂಪರೆಯಲ್ಲಿ ರಂಗಭೂಮಿ ಮತ್ತು ಚಲನಚಿತ್ರ ಮಾಧ್ಯಮಗಳ ನಡುವಿನ ಸಂಬಂಧವು ಕೇವಲ ಸಾಂದರ್ಭಿಕವಾದುದಲ್ಲ. ಅದು ಆಳವಾದ ಜೈವಿಕ ಸಂಬಂಧವನ್ನು ಹೊಂದಿದೆ. 19ನೇ ಶತಮಾನದ ಉತ್ತರಾರ್ಧ ಮತ್ತು 20ನೇ ಶತಮಾನದ ಆರಂಭದಲ್ಲಿ ಕರ್ನಾಟಕದ ಸಾಂಸ್ಕೃತಿಕ ಜೀವನವನ್ನು ಸಂಪೂರ್ಣವಾಗಿ ಆವರಿಸಿಕೊಂಡಿದ್ದದ್ದು ವೃತ್ತಿ ರಂಗಭೂಮಿ. ಉತ್ತರ ಕರ್ನಾಟಕದ 'ಶ್ರೀ ದತ್ತಾತ್ರೇಯ ನಾಟಕ ಮಂಡಳಿ' (ಶಿರಹಟ್ಟಿ ವೆಂಕಟೇಶ ರಾವ್ ಸ್ಥಾಪಿಸಿದ್ದು), ದಕ್ಷಿಣ ಕರ್ನಾಟಕದ 'ಗುಬ್ಬಿ ಚನ್ನ ಬಸವೇಶ್ವರ ಕೃಪಾ

ಪೋಷಿತ ನಾಟಕ ಕಂಪನಿ' (ಗುಬ್ಬಿ ವೀರಣ್ಣ ಸ್ಥಾಪಿಸಿದ್ದು ) ಹಾಗೂ 'ವಾಮನರಾವ್ ಮಾಸ್ಟರ್' 'ಕೈವಾರ ನಾಟಕ ಕಂಪನಿ' ಮುಂತಾದ ರಂಗಸಂಸ್ಥೆಗಳು ಲಕ್ಷಾಂತರ ಜನರಿಗೆ ಮನರಂಜನೆ ಮತ್ತು ಧಾರ್ಮಿಕ-ಸಾಮಾಜಿಕ ಜಾಗೃತಿ ನೀಡುವ ಪ್ರಮುಖ ಕೇಂದ್ರಗಳಾಗಿದ್ದವು.

1934ರಲ್ಲಿ ಕನ್ನಡದ ಪ್ರಥಮ ಮಾತನಾಡುವ ಚಿತ್ರ 'ಸತಿ ಸುಲೋಚನ' ಬಿಡುಗಡೆಯಾಯಿತು. ಈ ಚಿತ್ರದ ತಯಾರಿಕೆಗೆ ಬೇಕಾದ ಕಥೆ, ಸಂಗೀತ, ಸಂಭಾಷಣೆ ಹಾಗೂ ನಟನಟಿಯರು ಬಂದದ್ದು ವೃತ್ತಿ ರಂಗಭೂಮಿಯಿಂದಲೇ. ರಂಗಭೂಮಿಯ ಪ್ರಸಿದ್ಧ ನಾಟಕಕಾರ 'ಬಳ್ಳಾರಿ ರಾಘವ' ಅವರ ರಂಗ ಪ್ರದರ್ಶನಗಳಿಂದ ಪ್ರೇರಿತರಾಗಿ ಈ ಚಿತ್ರದ ಕಥಾವಸ್ತುವನ್ನು ಆಯ್ದುಕೊಳ್ಳಲಾಯಿತು. ರಂಗನಟರಾಗಿದ್ದ ಆರ್. ನಾಗೇಂದ್ರರಾವ್ (ರಾವಣನ ಪಾತ್ರ) ಮತ್ತು ಸುಬ್ಬಯ್ಯ ನಾಯ್ಡು (ಇಂದ್ರಜಿತುನ ಪಾತ್ರ) ಅವರು ರಂಗಭೂಮಿಯಲ್ಲಿದ್ದ ತಮ್ಮ ಧ್ವನಿ ಪ್ರಕ್ಷೇಪಣೆ ಮತ್ತು ರಂಗ ಅಭಿನಯವನ್ನೇ ಕ್ಯಾಮೆರಾದ ಮುಂದೆಯೂ ಪ್ರದರ್ಶಿಸಿದರು. ಈ ಚಿತ್ರದಲ್ಲಿ ಒಟ್ಟು 18 ಹಾಡುಗಳಿದ್ದವು. ಇವುಗಳಲ್ಲಿ ಹೆಚ್ಚಿನವು ರಂಗಭೂಮಿಯ ರಾಗಸಂಯೋಜನೆ ಹಾಗೂ 'ರಂಗಗೀತೆ'ಗಳ ಶೈಲಿಯನ್ನೇ ಅನುಕರಿಸಿದ್ದವು. ಇದೇ ವರ್ಷ ಬಿಡುಗಡೆಯಾದ ಎರಡನೇ ಕನ್ನಡ ಚಿತ್ರ 'ಭಕ್ತ ಧ್ರುವ' ಸಂಪೂರ್ಣವಾಗಿ ಗುಬ್ಬಿ ನಾಟಕ ಕಂಪನಿಯ ಬಾಲ ಕಲಾವಿದರನ್ನೇ ನೆಚ್ಚಿಕೊಂಡಿತ್ತು. ಈ ಚಿತ್ರದಲ್ಲಿ ಬಾಲಧ್ರುವನಾಗಿ ನಟಿಸಿದವರು ಮುಂದೆ ಕನ್ನಡ ನಾಡಿನ ರಂಗಪಿತಾಮಹರೆನಿಸಿದ ಮಾಸ್ಟರ್ ಹಿರಣ್ಣಯ್ಯ.

ಆರಂಭಿಕ ಹಂತದ ಕನ್ನಡ ಸಿನಿಮಾಗಳು ಸ್ವತಂತ್ರ 'ಸಿನಿಮ್ಯಾಟಿಕ್ ಮಾಧ್ಯಮ ಭಾಷೆ'ಯನ್ನು ಹೊಂದಿರಲಿಲ್ಲ. ಅವುಗಳನ್ನು 'ಛಾಯಾಗ್ರಹಿತ ರಂಗಭೂಮಿ' ಎಂದು ಕರೆಯಲಾಗುತ್ತಿತ್ತು. ಅಂದರೆ ನಟರು ರಂಗಮಂಚದ ಮೇಲಿದ್ದಂತೆ ಪರದೆಯ ಮುಂದೆ ಬಂದು ನಿಂತು, ಗಟ್ಟಿಯಾದ ಧ್ವನಿಯಲ್ಲಿ ಸುದೀರ್ಘ ಸಂಭಾಷಣೆಗಳನ್ನು ಹೇಳುತ್ತಿದ್ದರು. ಕ್ಯಾಮೆರಾವನ್ನು ಒಂದೇ ಸ್ಥಳದಲ್ಲಿಟ್ಟು, ನಾಟಕವನ್ನು ರೆಕಾರ್ಡ್ ಮಾಡಿದಂತೆ ಚಿತ್ರೀಕರಿಸಲಾಗುತ್ತಿತ್ತು. ಉದಾಹರಣೆಗೆ, 1935ರ 'ಸದಾರಮೆ' ಚಿತ್ರವು ಗುಬ್ಬಿ ವೀರಣ್ಣನವರ ಸೂಪರ್-ಹಿಟ್ ನಾಟಕದ ನೇರ ಚಲನಚಿತ್ರ ರೂಪವಾಗಿತ್ತು. ನಟರು ನಾಟಕದ ರಂಗಸಜ್ಜಿಕೆಯಂತೆಯೇ ನಿರ್ಮಿಸಲಾದ ಸೆಟ್‌ಗಳ ನಡುವೆ ಅಭಿನಯಿಸುತ್ತಿದ್ದರು.

1940 ಮತ್ತು 50 ರ ದಶಕದಲ್ಲಿ ರಂಗಭೂಮಿಯ ದೈತ್ಯ ಪ್ರತಿಭೆಯಾಗಿದ್ದ ಗುಬ್ಬಿ ವೀರಣ್ಣ' ಅವರು 'ಕರ್ನಾಟಕ ಫಿಲಂ ಕಾರ್ಪೊರೇಷನ್' ನಿರ್ಮಿಸಿ ಸ್ವತಃ ಸಿನಿಮಾ ನಿರ್ಮಾಣಕ್ಕೆ ಧುಮುಕಿದರು. 1945ರಲ್ಲಿ ಬಂದ 'ಹೇಮರೆಡ್ಡಿ ಮಲ್ಲಮ್ಮ' ಚಿತ್ರವು ರಂಗಭೂಮಿಯಿಂದ ಚಿತ್ರರಂಗಕ್ಕೆ ಆದ ದೊಡ್ಡಮಟ್ಟದ ತಾಂತ್ರಿಕ ಮತ್ತು ಕಲಾತ್ಮಕ ಜಿಗಿತಕ್ಕೆ ನಿದರ್ಶನ. 1954ರ 'ಬೇಡರ ಕಣ್ಣಪ್ಪ' ಚಿತ್ರವು ಕನ್ನಡ ಸಿನಿಮಾ ಇತಿಹಾಸದಲ್ಲೇ ಹೊಸ ಮೈಲಿಗಲ್ಲು ಸ್ಥಾಪಿಸಿತು. ಗುಬ್ಬಿ ಕಂಪನಿಯ ರಂಗನಟರಾಗಿದ್ದ ಮುತ್ತುರಾಜ್(ಡಾ।ರಾಜ್‌ಕುಮಾರ್) ಅವರನ್ನು ಚಿತ್ರರಂಗಕ್ಕೆ ಪರಿಚಯಿಸಿದ ಈ ಚಿತ್ರವು, ರಂಗಭೂಮಿಯ ಅಭಿನಯದ ಕಟ್ಟುಪಾಡುಗಳಿಂದ ಹೊರಬಂದು ಸಿನಿಮಾ ಮಾಧ್ಯಮಕ್ಕೆ ತಕ್ಕಂತೆ ನೈಸರ್ಗಿಕ ಅಭಿನಯ ನೀಡುವತ್ತ ಹೆಜ್ಜೆ ಇಟ್ಟಿತು.

ರಂಗಭೂಮಿಯು ಕೇವಲ ನಟರನ್ನಷ್ಟೇ ಅಲ್ಲದೆ, ಚಲನಚಿತ್ರಕ್ಕೆ ಅಗತ್ಯವಿದ್ದ ಸಾಹಿತ್ಯಿಕ ಬಲವನ್ನೂ ನೀಡಿತು. ಬಿ.ಪಿ. ಕಾಳೆ, ಸಂಸ, ಪಂಡಿತ್ ತಾರಾನಾಥ್ ಅವರಂತಹ ರಂಗನಾಟಕಕಾರರ ಸಂಭಾಷಣೆಗಳು ಸಿನಿಮಾಗಳಿಗೆ ಸಾಹಿತ್ಯಿಕ ಮೌಲ್ಯ ತಂದುಕೊಟ್ಟವು.

ರಂಗಸಂಗೀತದ ವಿದ್ವಾಂಸರಾಗಿದ್ದ ಹೊನ್ನಪ್ಪ ಭಾಗವತ್, ಮಲ್ಲಿಕಾರ್ಜುನ ಮನ್ಸೂರ್ ಅವರಂತಹ ಸಂಗೀತಗಾರರು ಆರಂಭಿಕ ಸಿನಿಮಾಗಳಿಗೆ ಶಾಸ್ತ್ರೀಯ ಮತ್ತು ರಂಗಸಂಗೀತದ ಸ್ಪರ್ಶ ನೀಡಿದರು. ಹೀಗೆ 1930ರ ದಶಕದಿಂದ 1950ರ ದಶಕದವರೆಗಿನ ಇತಿಹಾಸವನ್ನು ಗಮನಿಸಿದಾಗ, ಕನ್ನಡ ಚಲನಚಿತ್ರ ಮಾಧ್ಯಮವು ತನ್ನ ಶೈಶವಾವಸ್ಥೆಯ ಸಂಪೂರ್ಣ ಪೋಷಣೆಗೆ ಕನ್ನಡ ರಂಗಭೂಮಿಗೇ ಋಣಿಯಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

**ವೃತ್ತಿ ರಂಗಭೂಮಿಯ ಕೊಡುಗೆ ಮತ್ತು ಶ್ರೇಷ್ಠ ವ್ಯಕ್ತಿತ್ವಗಳು**

ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ವೃತ್ತಿ ರಂಗಭೂಮಿಯು ಕೇವಲ ನಾಟಕಗಳನ್ನು ಪ್ರದರ್ಶಿಸುವ ಸಂಸ್ಥೆಯಾಗಿರದೆ, ಅಂದಿನ ಕಾಲದ ಬೃಹತ್ 'ಕಲಾ ಕಮ್ಮಟ' ಮತ್ತು 'ಅಕಾಡೆಮಿ'ಯಂತೆ ಕಾರ್ಯನಿರ್ವಹಿಸಿತು. 20ನೇ ಶತಮಾನದ ಆರಂಭದಲ್ಲಿ ಸಾಂಸ್ಕೃತಿಕ ಧಾರ್ಮಿಕ ಮತ್ತು ರಾಷ್ಟ್ರೀಯ ಜಾಗೃತಿಯನ್ನು ಮೂಡಿಸುವಲ್ಲಿ ವೃತ್ತಿ ನಾಟಕ ಕಂಪನಿಗಳ ಪಾತ್ರ ಅತ್ಯಂತ ಪ್ರಮುಖವಾಗಿತ್ತು. ಇವುಗಳು ಮುಂದೆ ಜನ್ಮತಾಳಿದ ಕನ್ನಡ ಚಲನಚಿತ್ರ ಮಾಧ್ಯಮಕ್ಕೆ ಶಿಸ್ತು, ತಾಂತ್ರಿಕ ಬಲ ಮತ್ತು ಕಲಾತ್ಮಕ ಆಧಾರವನ್ನು ಒದಗಿಸಿದ ಮೂಲಸೆಲೆಯಾದವು. ಆ ಕಾಲದ ವೃತ್ತಿ ರಂಗಭೂಮಿ ಕಂಪನಿಗಳು ಬಡ ಮತ್ತು ಗ್ರಾಮೀಣ ಮೂಲದ ಪ್ರತಿಭಾವಂತ ಕಲಾವಿದರಿಗೆ ಆಶ್ರಯ ನೀಡಿ, ಅವರಿಗೆ ನಟನೆ, ಗಾಯನ, ನೃತ್ಯ, ಸಾಹಿತ್ಯ ಉಚ್ಚಾರಣೆ ಮತ್ತು ವೇಷಭೂಷಣ ವಿನ್ಯಾಸಗಳಲ್ಲಿ ಕಠಿಣ ತರಬೇತಿ ನೀಡುತ್ತಿದ್ದವು. ಇಂತಹ ಶಿಸ್ತಿನಿಂದ ಬೆಳೆದ ಕಲಾವಿದರೇ ಮುಂದೆ ಕನ್ನಡ ಚಲನಚಿತ್ರರಂಗವನ್ನು ಆಳಿದರು.

ರಂಗಸಂಗೀತವು ಕರ್ನಾಟಕದ ಶಾಸ್ತ್ರೀಯ ಮತ್ತು ಸುಗಮ ಸಂಗೀತ ಎರಡಕ್ಕೂ ಜೀವ ನೀಡಿತು. ಹಿಂದೂಸ್ಥಾನಿ ಮತ್ತು ಕರ್ನಾಟಕ ಸಂಗೀತದ ನಾದವೈಭವವನ್ನು ನಾಟಕಗಳ ಮೂಲಕ ಮನೆಮನೆಗಳಿಗೆ ತಲುಪಿಸಲಾಯಿತು. ವೃತ್ತಿ ರಂಗಭೂಮಿಯ ಕಥೆಗಳು, ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ಸಂವೇದನೆಗಳು ಮುಂಬರುವ ಸಿನಿಮಾಗಳ ಕಥಾವಸ್ತುವಿಗೆ ಮೂಲವಸ್ತುವಾದವು. ಗುಬ್ಬಿ ಕಂಪನಿಯಂತಹ ಸಂಸ್ಥೆಗಳು ರಂಗಮಂಚದ ಮೇಲೆ ನಿಜವಾದ ಆನೆ, ಕುದುರೆ, ರಥಗಳನ್ನು ಬಳಸುತ್ತಿದ್ದುದು ಮತ್ತು ನೀರಿನ ಜಲಪಾತ, ಬೆಂಕಿಯ ಸನ್ನಿವೇಶಗಳನ್ನು ಪ್ರದರ್ಶಿಸುವಲ್ಲಿ ಬಳಸುತ್ತಿದ್ದ 'ಟ್ರಿಕ್ ಸೀನ್'ಗಳು ಮುಂದೆ ಚಿತ್ರರಂಗದ ದೃಶ್ಯ ಸಂಯೋಜನೆ ಮತ್ತು ವಿಶುವಲ್ ಎಫೆಕ್ಟ್ಸ್‌ಗೆ ಸ್ಫೂರ್ತಿಯಾದವು.

ಕನ್ನಡ ರಂಗಭೂಮಿ ಮತ್ತು ಚಿತ್ರರಂಗದ ಇತಿಹಾಸವನ್ನು ರಂಗ ಪಿತಾಮಹ 'ಗುಬ್ಬಿ ವೀರಣ್ಣ' ಅವರ ಉಲ್ಲೇಖವಿಲ್ಲದೆ ಬರೆಯಲು ಸಾಧ್ಯವಿಲ್ಲ. ತಮ್ಮ 'ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾ ಪೋಷಿತ ನಾಟಕ ಕಂಪನಿ' ಮೂಲಕ ರಂಗಭೂಮಿಯನ್ನು ಒಂದು ಬೃಹತ್ ಉದ್ಯಮವನ್ನಾಗಿ ಬೆಳೆಸಿದರು. ಇವರು ಕೇವಲ ನಾಟಕ ನಿರ್ಮಿಸಲಿಲ್ಲ; 'ಕರ್ನಾಟಕ ಫಿಲಂ ಕಾರ್ಪೊರೇಷನ್' ಸ್ಥಾಪಿಸಿ ಸದಾರಮೆ', 'ಹೇಮರೆಡ್ಡಿ ಮಲ್ಲಮ್ಮ', 'ಬೇಡರ ಕಣ್ಣಪ್ಪ' ಮುಂತಾದ ಮಹತ್ವದ ಚಿತ್ರಗಳನ್ನು ನಿರ್ಮಿಸಿದರು. ಡಾ। ರಾಜ್‌ಕುಮಾರ್, ನರಸಿಂಹರಾಜು, ಜಿ.ವಿ.ಅಯ್ಯರ್, ಬಿ.ಆರ್. ಪಂತುಲು ಮತ್ತು ಬಾಲಕೃಷ್ಣ ಅವರಂತಹ ಅನೇಕ ಶ್ರೇಷ್ಠ ಕಲಾವಿದರನ್ನು ಗುರುತಿಸಿ, ತರಬೇತಿ ನೀಡಿ ಚಿತ್ರರಂಗಕ್ಕೆ ನೀಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಗುಬ್ಬಿ ಕಂಪನಿಯಲ್ಲಿ ರಂಗನಟರಾಗಿ ವೃತ್ತಿಜೀವನವನ್ನು ಆರಂಭಿಸಿದ 'ಮುತ್ತುರಾಜ್' ರಂಗಭೂಮಿಯಲ್ಲಿ ಪಡೆದ ಶಿಸ್ತು, ಧ್ವನಿ ಸೌಂದರ್ಯ ಮತ್ತು ಸ್ಪಷ್ಟ ಕನ್ನಡ ಉಚ್ಚಾರಣೆಯಿಂದಾಗಿ ಮುಂದೆ ಕನ್ನಡ ಚಿತ್ರರಂಗದ ಸಾಂಸ್ಕೃತಿಕ ಪ್ರತಿಮೆಯಾಗಿ ಬೆಳೆದರು. 'ಬೇಡರ ಕಣ್ಣಪ್ಪ' 'ಬಬ್ರುವಾಹನ', 'ಮಯೂರ', ಸತ್ಯ ಹರಿಶ್ಚಂದ್ರ, ಮುಂತಾದ ಚಿತ್ರಗಳಲ್ಲಿ ಇವರ ರಂಗಭೂಮಿ

ಹಿನ್ನೆಲೆಯ ಅಭಿನಯವು ಸಾಂಸ್ಕೃತಿಕ ಗಾಂಭೀರ್ಯವನ್ನು ತಂದಿತಿತ್ತು.

ರಂಗಭೂಮಿಯ ಅಭಿನಯದ ಅನುಭವದಿಂದ ಬಂದ ಕನ್ನಡ ಚಿತ್ರರಂಗದ ಭೀಷ್ಮ ಜಿ.ವಿ.ಅಯ್ಯರ್ ಮತ್ತು ಬೆಳ್ಳಿ ತೆರೆಯ ಗಾರುಡಿಗರೆಂದೇ ಪ್ರಸಿದ್ಧಿ ಪಡೆದ ಬಿ.ಆರ್.ಪಂತುಲು ಮುಂದೆ ಕನ್ನಡ ಚಲನಚಿತ್ರರಂಗದ ನಿರ್ದೇಶಕರು ಹಾಗೂ ನಿರ್ಮಾಪಕರಾಗಿ ಮುನ್ನಡೆಸಿದರು. ಜಿ.ವಿ.ಅಯ್ಯರ್ ಅವರು ಮುಂದೆ 'ಶಂಕರಾಚಾರ್ಯ, ರಾಮಾನುಜಾಚಾರ್ಯ' ಮತ್ತು 'ಭಗವದ್ಗೀತಾ' ಅಂತಹ ಸಂಸ್ಕೃತ ಹಾಗೂ ಕನ್ನಡ ಚಿತ್ರಗಳನ್ನು ನಿರ್ಮಿಸಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಗೌರವ ತಂದಿತ್ತರು. ಬಿ.ಆರ್. ಪಂತುಲು ಅವರು 'ಕಿತ್ತೂರು ಚೆನ್ನಮ್ಮ', 'ಸ್ಕೂಲ್ ಮಾಸ್ಟರ್', 'ಶ್ರೀಕೃಷ್ಣ ದೇವರಾಯ' ಮುಂತಾದ ಐತಿಹಾಸಿಕ ಚಿತ್ರಗಳನ್ನು ತೆರೆಗೆ ತಂದರು. ಮುಂದೆ ಮಾಸ್ಟರ್ ಹಿರಣ್ಣಯ್ಯ ತಮ್ಮ 'ಕಿವಿಚುಚ್ಚುವ' ಸಾಮಾಜಿಕ ವಿಡಂಬನಾತ್ಮಕ ನಾಟಕಗಳ ಮೂಲಕ (ಉದಾ: ಲಂಚಾವತಾರ, ಭ್ರಷ್ಟಾಚಾರ) ವೃತ್ತಿ ರಂಗಭೂಮಿಗೆ ಹೊಸ ರಕ್ತ ಉಣಿಸಿದರು. ಅವರ ಸಂಭಾಷಣಾ ಶೈಲಿ, ಸಮಯಪ್ರಜ್ಞೆ, ಮತ್ತು ವಾಗ್ಝರಿಗಳು ಮುಂದೆ ಕನ್ನಡ ಸಿನಿಮಾಗಳ ಸಂಭಾಷಣೆ ಹಾಗೂ ಹಾಸ್ಯ ಭಾಗಗಳಿಗೆ ಹೊಸ ಆಯಾಮ ನೀಡಿದವು. ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿಯ ಧ್ರುವತಾರೆಯಾಗಿದ್ದ ಏಣಗಿ ಬಾಳಪ್ಪ ಇವರು, 'ಜಗಜ್ಯೋತಿ ಬಸವೇಶ್ವರ' ಕಿತ್ತೂರ ಚೆನ್ನಮ್ಮ, ರಾಜ ಹರಿಶ್ಚಂದ್ರ ಮುಂತಾದ ನಾಟಕಗಳ ಮೂಲಕ ಶರಣ ಸಂಸ್ಕೃತಿ ಜೀವನ ಮೌಲ್ಯ ಮತ್ತು ಸಾಮಾಜಿಕ ಕ್ರಾಂತಿಯ ಸಂದೇಶಗಳನ್ನು ರಂಗದ ಮೇಲೆ ಹಾಗೂ ಸಿನಿಮಾಗಳಲ್ಲಿ ಜೀವಂತವಾಗಿಟ್ಟರು. ಈ ರೀತಿ, ವೃತ್ತಿ ರಂಗಭೂಮಿಯು ತನ್ನ ನಟರು, ನಾಟಕಕಾರರು, ಸಂಗೀತಜ್ಞರು ಮತ್ತು ದೃಶ್ಯ ತಂತ್ರಜ್ಞರ ಮೂಲಕ ಕನ್ನಡ ಚಲನಚಿತ್ರ ಮಾಧ್ಯಮಕ್ಕೆ ಜೀವಕೋಶದಂತೆ ಬೆಂಬಲವಾಗಿ ನಿಂತು, ಕನ್ನಡ ಚಿತ್ರರಂಗ ತನ್ನದೇ ಆದ ಸ್ವತಂತ್ರ ಅಸ್ಮಿತೆಯನ್ನು ಪಡೆದುಕೊಳ್ಳಲು ಭದ್ರವಾದ ತಳಪಾಯವನ್ನು ನಿರ್ಮಿಸಿಕೊಟ್ಟಿತು.

**ಹವ್ಯಾಸಿ ರಂಗಭೂಮಿ ಮತ್ತು 'ಸಮಾಂತರ ಸಿನಿಮಾ' ಕ್ರಾಂತಿ**

1960 ಮತ್ತು 1970ರ ದಶಕಗಳು ಕನ್ನಡ ಸಾಂಸ್ಕೃತಿಕ ಇತಿಹಾಸದಲ್ಲಿ ಬೌದ್ಧಿಕ ಹಾಗೂ ಕಲಾತ್ಮಕ ಪುನರುಜ್ಜೀವನದ ಕಾಲಘಟ್ಟ. ಈ ಅವಧಿಯಲ್ಲಿ ವಾಣಿಜ್ಯೀಕರಣಗೊಂಡ ವೃತ್ತಿ ರಂಗಭೂಮಿ ವಾಣಿಜ್ಯ ಸಿನಿಮಾಗಳ ಚೌಕಟ್ಟನ್ನು ಮುರಿದು, ಹೊಸ ಅಲೆಯ 'ಹವ್ಯಾಸಿ ರಂಗಭೂಮಿ' ಹಾಗೂ 'ಸಮಾಂತರ ಸಿನಿಮಾ' ಲೋಕದಲ್ಲಿ ಕ್ರಾಂತಿ ಉಂಟಾಯಿತು. ಕನ್ನಡದ ಸಾಹಿತ್ಯ ಲೋಕದಲ್ಲುಂಟಾದ 'ನವ್ಯ ಸಾಹಿತ್ಯ ಚಳವಳಿ' ಈ ಎರಡೂ ಮಾಧ್ಯಮಗಳಿಗೆ ಪ್ರಸಕ್ತ ವೈಚಾರಿಕ ಹಾಗೂ ಬೌದ್ಧಿಕ ಇಂಧನವನ್ನು ಒದಗಿಸಿತು. ವೃತ್ತಿ ರಂಗಭೂಮಿ ಹೆಚ್ಚಾಗಿ ಪೌರಾಣಿಕ ಹಾಗೂ ಮನರಂಜನಾತ್ಮಕ ವಿಷಯಗಳಿಗೆ ಸೀಮಿತವಾಗಿದ್ದಾಗ, ನಗರೀಕೃತ ಹಾಗೂ ಬೌದ್ಧಿಕ ಯುವಜನತೆ ಹವ್ಯಾಸಿ ರಂಗತಂಡಗಳನ್ನು ಕಟ್ಟಿ ಹೊಸ ಪ್ರಯೋಗಗಳಿಗೆ ಕೈ ಹಾಕಿದರು. ಬೆಂಗಳೂರಿನ 'ಸಮುದಾಯ', 'ಬೆನಕ' (ಬಿ.ವಿ.ಕಾರಂತರ ನೇತೃತ್ವದಲ್ಲಿ ), 'ರಂಗಸಂಪದ', 'ಸಂಚಾರಿ' ಹಾಗೂ ಮೈಸೂರಿನ 'ಸಮತೇಜೋ ರಂಗತಂಡ' ಮುಂತಾದವು ರಂಗಭೂಮಿಯನ್ನು ಕೇವಲ ರಂಜನೆಯ ಸಾಧನವಾಗಿ ನೋಡದೆ, ಸಾಮಾಜಿಕ ಮತ್ತು ರಾಜಕೀಯ ಜಾಗೃತಿಯ ಅಸ್ತ್ರವನ್ನಾಗಿ ಬಳಸಿಕೊಂಡವು. ಬರ್ಟೋಲ್ಟ್ ಬ್ರೆಕ್ಟ್, ಸ್ಯಾಮ್ಯುಯೆಲ್ ಬೆಕೆಟ್, ಮತ್ತು ಅಲ್ಬರ್ ಕ್ಯಾಮು ಮುಂತಾದ ಪಾಶ್ಚಿಮಾತ್ಯ ಚಿಂತಕರ ರಂಗಕೃತಿಗಳು ಕನ್ನಡಕ್ಕೆ ಅನುವಾದಗೊಂಡು ಪ್ರದರ್ಶನಗೊಂಡವು. ಇದು ರಂಗ ಅಭಿನಯ, ರಂಗವಿನ್ಯಾಸ ಮತ್ತು ರಂಗಸಂಗೀತದಲ್ಲಿ ಹೊಸ ಸಂವೇದನೆಗಳನ್ನು ಸೃಷ್ಟಿಸಿತು.

ಹವ್ಯಾಸಿ ರಂಗಭೂಮಿಯ ಕಲಾತ್ಮಕ ತೀವ್ರತೆ ಮತ್ತು ಸಾಹಿತ್ಯಿಕ ಆಳವು 1970ರಲ್ಲಿ ಕನ್ನಡ ಬೆಳ್ಳಿಪರದೆಗೆ ಲಂಘಿಸಿತು. ಯು.ಆರ್.ಅನಂತಮೂರ್ತಿ ಅವರ ಕಾದಂಬರಿ ಆಧಾರಿತ ಪಟ್ಟಾಭಿರಾಮ ರೆಡ್ಡಿ ನಿರ್ದೇಶಿತ ಮತ್ತು ರಂಗಕರ್ಮಿ ಗಿರೀಶ್ ಕಾರ್ನಾಡ್ ಪ್ರಮುಖ ಪಾತ್ರದಲ್ಲಿದ್ದ 'ಸಂಸ್ಕಾರ' (1970) ಚಲನಚಿತ್ರವು ಕನ್ನಡ ಸಮಾಂತರ ಸಿನಿಮಾದ ಬಾಗಿಲು ತೆರೆಯಿತು. ಈ ಚಿತ್ರವು ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಚಿತ್ರವಾಗಿ 'ಸ್ವರ್ಣ ಕಮಲ' ಪ್ರಶಸ್ತಿ ಪಡೆಯುವುದರೊಂದಿಗೆ ಕನ್ನಡ ಸಿನಿಮಾ ಲೋಕಕ್ಕೆ ಹೊಸ ಭಾಷ್ಯ ಬರೆಯಿತು. ರಂಗಭೂಮಿಯ ಬೌದ್ಧಿಕತೆ ಸಿನಿಮಾಗೆ ಬಂದಾಗ ಉಂಟಾಗುವ ಕಲಾತ್ಮಕ ಮುಖಾಮುಖಿಯನ್ನು 'ಸಂಸ್ಕಾರ' ಪ್ರದರ್ಶಿಸಿತು.

**ರಂಗ-ಸಿನಿಮಾ ಕ್ರಾಂತಿಯ ನಾಯಕರು ಮತ್ತು ಅವರ ಕೊಡುಗೆಗಳು**

ರಂಗಭೂಮಿ ಮತ್ತು ಸಿನಿಮಾ ಜಗತ್ತಿನ ಜಂಗಮರೆನಿಸಿದ ಬಿ.ವಿ.ಕಾರಂತರು ಹವ್ಯಾಸಿ ರಂಗಭೂಮಿಯ ರಂಗಸಂಗೀತ ಮತ್ತು ದೃಶ್ಯ ಸೌಂದರ್ಯವನ್ನು ಬೆಳ್ಳಿಪರದೆಗೆ ಯಶಸ್ವಿಯಾಗಿ ತಂದವರು. ಇವರ ನಿರ್ದೇಶನದ 'ಚೋಮನ ದುಡಿ' ಚಿತ್ರವು ದಲಿತ ಚೇತನದ ನೋವು ಮತ್ತು ಶೋಷಣೆಯನ್ನು ಅದ್ಭುತವಾಗಿ ಚಿತ್ರಿಸಿತು. ಬಿ.ವಿ.ಕಾರಂತರು ತಮ್ಮ ನಿರ್ದೇಶನದ ನಾಟಕಗಳಾದ ಸತ್ತವರ ನೆರಳು, ಜೋಕುಮಾರ ಸ್ವಾಮಿಗಳಲ್ಲಿ ಬಳಸುತ್ತಿದ್ದ ಸಾಂಪ್ರದಾಯಿಕ ಜಾನಪದ ಮಟ್ಟುಗಳು ಹಾಗೂ ನೈಸರ್ಗಿಕ ಧ್ವನಿ ಪರಿಣಾಮಗಳನ್ನು ಸಿನಿಮಾದ ಹಿನ್ನೆಲೆ ಸಂಗೀತದಲ್ಲೂ ಬಳಸಿ ಕ್ರಾಂತಿ ಮಾಡಿದರು. ಅಂತರರಾಷ್ಟ್ರೀಯ ಮಟ್ಟದ ನಾಟಕಕಾರರಾಗಿದ್ದ ಗಿರೀಶ್ ಕಾರ್ನಾಡ್ ರಂಗಭೂಮಿ ಮತ್ತು ಚಲನಚಿತ್ರಗಳ ನಡುವೆ ಕಲಾತ್ಮಕ ಸೇತುವೆಯಾಗಿದ್ದರು. ಕಾರ್ನಾಡ್ ಅವರು 'ವಂಶವೃಕ್ಷ' (ಬಿ.ವಿ.ಕಾರಂತರ ಜೊತೆ ಜಂಟಿ ನಿರ್ದೇಶನ), 'ಕಾಡು', 'ಒಂದಾನೊಂದು ಕಾಲದಲ್ಲಿ' ಮತ್ತು 'ಉತ್ಸವ್' ಮುಂತಾದ ಸಮಾಂತರ ಸಿನಿಮಾಗಳನ್ನು ನಿರ್ದೇಶಿಸಿದರು. ರಂಗಭೂಮಿಯ ಸಾಹಿತ್ಯಿಕ ಶಕ್ತಿಯನ್ನು ಸಿನಿಮಾದ 'ಕ್ಯಾಮರಾ ಕೋನ'ಗಳಿಗೆ ತಕ್ಕಂತೆ ಹೇಗೆ ಪರಿವರ್ತಿಸಬೇಕು ಎಂಬುದನ್ನು ಕಾರ್ನಾಡ್ ತಮ್ಮ ಚಿತ್ರಗಳ ಮೂಲಕ ತೋರಿಸಿಕೊಟ್ಟರು.

ಶಿವಮೊಗ್ಗ ಜಿಲ್ಲೆಯ ಹೆಗ್ಗೋಡಿನಲ್ಲಿ ಕೆ.ವಿ.ಸುಬ್ಬಣ್ಣ ಅವರು ಸ್ಥಾಪಿಸಿದ 'ನೀನಾಸಂ (ನೀಲಕಂಠೇಶ್ವರ ನಾಟ್ಯ ಸೇವಾ ಸಂಘ) ಸಂಸ್ಥೆಯು ರಂಗಭೂಮಿ ಮತ್ತು ಸಿನಿಮಾ ಶಿಕ್ಷಣವನ್ನು ಗ್ರಾಮ ಭಾರತಕ್ಕೆ ಕೊಂಡೊಯ್ದ ಕೀರ್ತಿಗೆ ಭಾಜನವಾಯಿತು. ನೀನಾಸಂ ಸ್ಥಾಪಿಸಿದ ಫಿಲ್ಮ್ ಸೊಸೈಟಿಗಳ ಮೂಲಕ ವಿಶ್ವಪ್ರಸಿದ್ಧ ನಿರ್ದೇಶಕರ (ಸತ್ಯಜಿತ್ ರೇ, ಇಂಗಾರ್ ಬರ್ಗ್ಮನ್, ಅಕಿರಾ ಕುರೊಸಾವಾ) ಚಿತ್ರಗಳನ್ನು ಗ್ರಾಮೀಣ ಪ್ರೇಕ್ಷಕರಿಗೆ ತೋರಿಸಲಾಯಿತು. ನೀನಾಸಂ ರಂಗಶಾಲೆಗಳಿಂದ ತರಬೇತಿ ಪಡೆದು ಬಂದ ಕೆ.ವಿ.ಅಕ್ಷರ, ಪ್ರಕಾಶ್‌ರಾಜ್, ಅಚ್ಯುತ್ ಕುಮಾರ್, ನೀನಾಸಂ ಸತೀಶ್, ಮಂಡ್ಯ ರಮೇಶ್ ಮುಂತಾದ ಕಲಾವಿದರು ಇಂದಿಗೂ ರಂಗಭೂಮಿ ಮತ್ತು ಸಿನಿಮಾಗಳ ನಡುವಿನ ಕೊಂಡಿಯಾಗಿ ಕೆಲಸ ಮಾಡುತ್ತಿದ್ದಾರೆ. ಪತ್ರಕರ್ತ ಹಾಗೂ ನಾಟಕಕಾರ ಪಿ.ಲಂಕೇಶ್ ಅವರು ತಮ್ಮ 'ಪಲ್ಲವಿ' ಚಿತ್ರದ ಮೂಲಕ ನೈಜ ಅಭಿನಯ ಹಾಗೂ ಕ್ಯಾಮೆರಾ ಸ್ವತಂತ್ರ ಶೈಲಿಯನ್ನು ಪರಿಚಯಿಸಿದರು. ವಾಣಿಜ್ಯ ಸಿನಿಮಾಗಳ ಕೃತಕ ಸೆಟ್‌ಗಳನ್ನು ಬದಿಗೊತ್ತಿ, ಹಳ್ಳಿಗಳು ಮತ್ತು ನೈಜ ಬೀದಿಗಳಲ್ಲಿ ಚಿತ್ರೀಕರಣ ಮಾಡಲು ಆರಂಭಿಸಲಾಯಿತು. ಇದು ರಂಗಭೂಮಿಯ 'ಓಪನ್ ಏರ್' ಭಾವನೆಯನ್ನು ಸಿನಿಮಾಗೆ ನೀಡಿತು. ವಾಣಿಜ್ಯ ಚಿತ್ರಗಳ ಕೃತಕ ಆರ್ಕೆಸ್ಟ್ರಾಗಳ ಬದಲು ಜಾನಪದ ವಾದ್ಯಗಳು ಮತ್ತು ನೈಸರ್ಗಿಕ ಶಬ್ದಗಳಿಗೆ ಆದ್ಯತೆ ನೀಡಲಾಯಿತು. ಜಾತಿ ಪದ್ಧತಿ, ಜಮೀನ್ದಾರಿ ಶೋಷಣೆ, ರಾಜಕೀಯ ಭ್ರಷ್ಟಾಚಾರ ಮತ್ತು ಮಹಿಳಾ ಹಕ್ಕುಗಳಂತಹ ವಿಷಯಗಳ ಮೇಲೆ ಸಮಾಂತರ

ಸಿನಿಮಾಗಳು ಬೆಳಕು ಚೆಲ್ಲಿದವು.

**ಸಮಕಾಲೀನ ಸಂದರ್ಭ ಮತ್ತು ಪರಸ್ಪರ ಪ್ರಭಾವ**

21ನೇ ಶತಮಾನದ ಈ ಡಿಜಿಟಲ್ ಹಾಗೂ ತಾಂತ್ರಿಕ ಯುಗದಲ್ಲಿ ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ಮಾಧ್ಯಮಗಳ ನಡುವಿನ ಬಾಂಧವ್ಯವು ಹೊಸ ರೂಪವನ್ನು ಪಡೆದುಕೊಂಡಿದೆ. ಒಂದೆಡೆ ಡಿಜಿಟಲ್ ತಂತ್ರಜ್ಞಾನ, ಒಟಿಟಿ ವೇದಿಕೆಗಳು ಹಾಗೂ ಸಾಮಾಜಿಕ ಜಾಲತಾಣಗಳ ಅಬ್ಬರ ಹೆಚ್ಚಿದ್ದರೆ, ಇನ್ನೊಂದೆಡೆ ಪ್ರೇಕ್ಷಕನ ಆಸಕ್ತಿ ಮತ್ತು ಕಲಾತ್ಮಕ ಅಭಿವ್ಯಕ್ತಿಯ ವ್ಯಾಖ್ಯಾನಗಳೇ ಬದಲಾಗಿವೆ. ಈ ಬದಲಾದ ಸಂದರ್ಭದಲ್ಲೂ ರಂಗಭೂಮಿ ಮತ್ತು ಸಿನಿಮಾ ಪರಸ್ಪರ ಪ್ರಭಾವಿಸುತ್ತಾ, ಒಂದಕ್ಕೊಂದು ಪೂರಕವಾಗಿ ಜಾಗತಿಕ ಮಟ್ಟದಲ್ಲಿ ಹೊಸ ಮೈಲಿಗಲ್ಲುಗಳನ್ನು ಸ್ಥಾಪಿಸುತ್ತಿವೆ. ಇಂದಿನ ಸಮಕಾಲೀನ ಕನ್ನಡ ಚಿತ್ರರಂಗದಲ್ಲಿ ಕ್ರಾಂತಿಕಾರಿ ಬದಲಾವಣೆ ತರುತ್ತಿರುವ ಹೆಚ್ಚಿನ ಯುವ ನಿರ್ದೇಶಕರು ಮತ್ತು ಬರಹಗಾರರು ರಂಗಭೂಮಿಯ ಹಿನ್ನೆಲೆಯಿಂದ ಬಂದವರಾಗಿದ್ದಾರೆ. ಅವರು ಸಾಂಪ್ರದಾಯಿಕ ಕಮರ್ಷಿಯಲ್ ಸಿನಿಮಾದ ಸೂತ್ರಗಳನ್ನು ಮುರಿದು, ರಂಗಭೂಮಿಯ ನೈಜತೆ ಹಾಗೂ ಕಥನ ಕೌಶಲ್ಯವನ್ನು ಬೆಳ್ಳಿಪರದೆಗೆ ತರುತ್ತಿದ್ದಾರೆ. ರಿಷಬ್ ಶೆಟ್ಟಿ ಅವರ 'ಕಾಂತಾರ–1' ಚಿತ್ರವು ಜಾಗತಿಕ ಮಟ್ಟದಲ್ಲಿ ಗಳಿಸಿದ ಅಭೂತಪೂರ್ವ ಯಶಸ್ಸಿಗೆ ಪ್ರಮುಖ ಕಾರಣ ಅದಲ್ಲಿದ್ದ ರಂಗಭೂಮಿಯ ತೀವ್ರತೆ, ದೈವಕೋಲದಂತಹ ರಂಗಸ್ವರೂಪ ಹಾಗೂ ನೈಜ ನಟನಾ ವೈಖರಿ. ರಂಗಭೂಮಿಯಲ್ಲಿ ಬಳಸಲಾಗುವ 'ಕಲ್ಪಿತ ನೈಜತೆ' ಹಾಗೂ ದೈಹಿಕ ಅಭಿನಯದ ಸಾಂದ್ರತೆಯನ್ನು ಈ ಚಿತ್ರ ಸಿನಿಮಾದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಂಡಿತು. ರಾಜ್ ಬಿ. ಶೆಟ್ಟಿ (ಒಂದು ಮೊಟ್ಟೆಯ ಕಥೆ, ಗರುಡ ಗಮನ ವೃಷಭ ವಾಹನ) ಮತ್ತು ರೋಹಿತ್ ಪದಕಿ ಮುಂತಾದ ಯುವ ಸೃಷ್ಟಿಕರ್ತರು ರಂಗಭೂಮಿಯ ನೈಸರ್ಗಿಕ ಸಂಭಾಷಣಾ ಶೈಲಿ ಹಾಗೂ 'ಕಪ್ಪು ಹಾಸ್ಯ'ವನ್ನು ಚಲನಚಿತ್ರಗಳಲ್ಲಿ ಯಶಸ್ವಿಯಾಗಿ ಅಳವಡಿಸಿದ್ದಾರೆ.

ಇಂದಿನ ಕನ್ನಡ ಸಿನಿಮಾಗಳ ನಟನಾ ಶೈಲಿ 'ಅತಿರಂಜಿತತೆಯಿಂದ ಹೊರಬಂದು 'ಸಹಜ ನಟನೆ'ಗೆ ತಿರುಗಲು ರಂಗಭೂಮಿಯಿಂದ ಬಂದ ನಟರೇ ಮುಖ್ಯ ಕಾರಣ. ಅಚ್ಯುತ್‌ಕುಮಾರ್ ಪ್ರಕಾಶ್ ರಾವ್, ದಿವಂಗತ ಸಂಚಾರಿ ವಿಜಯ್, ನೀನಾಸಂ ಸತೀಶ್, ಮಂಡ್ಯ ರಮೇಶ್, ರಾಜೇಶ್ ನಟರಂಗ, ವೈಶಾಲಿ ಕಾಸರವಳ್ಳಿ ಮತ್ತು ಸುಚೇಂದ್ರ ಪ್ರಸಾದ್ ಅವರಂತಹ ನಟರು ರಂಗಭೂಮಿಯಿಂದ ಸಿನಿಮಾಗೆ ಬಂದು, ಪಾತ್ರಗಳಿಗೆ ಜೀವ ತುಂಬುತ್ತಿದ್ದಾರೆ. 'ನೀನಾಸಂ' 'ರಂಗಾಯಣ', ಅಭಿನಯ ತರಂಗ' ಹಾಗೂ 'ಸುರಭಿ'ಯಂತಹ ರಂಗಶಾಲೆಗಳಲ್ಲಿ ಪಡೆದ ನಟನಾ ತರಬೇತಿ ಮತ್ತು ಶರೀರ ಭಾಷೆಯ ಶಿಸ್ತು ಇಂದಿನ ಚಿತ್ರರಂಗದಲ್ಲಿ ಅತ್ಯಂತ ಮೌಲ್ಯಯುತವಾದದ್ದೆಂದು ಪರಿಗಣಿತವಾಗಿದೆ. ಇಂದು ರಂಗಭೂಮಿ ಕೇವಲ ಸಿನಿಮಾಗೆ ಕೊಡುಗೆ ನೀಡುತ್ತಿಲ್ಲ; ಬದಲಾಗಿ ಸಿನಿಮಾದ ತಂತ್ರಜ್ಞಾನವನ್ನು ತನ್ನ ರಂಗಪ್ರದರ್ಶನಗಳಿಗೆ ಬಳಸಿಕೊಳ್ಳುತ್ತಿದೆ. ಇಂದಿನ ರಂಗನಿರ್ದೇಶಕರು ರಂಗಸಜ್ಜಿಕೆಯಲ್ಲಿ ಡಿಜಿಟಲ್ ಪ್ರೊಜೆಕ್ಷನ್, ಎಲ್.ಇ.ಡಿ. ಪರದೆಗಳು, ಅತ್ಯಾಧುನಿಕ 'ಇಂಟಲಿಜೆಂಟ್ ಲೈಟಿಂಗ್' ಹಾಗೂ 3ಡಿ ಸೌಂಡ್ ಎಫೆಕ್ಟ್‌ಗಳನ್ನು ಬಳಸುತ್ತಿದ್ದಾರೆ. ಇದು ನಾಟಕ ವೀಕ್ಷಕರಿಗೆ ಒಂದು 'ಸಿನಿಮ್ಯಾಟಿಕ್' ಅನುಭವವನ್ನು ನೀಡುತ್ತಿದೆ. ಗಿರೀಶ್ ಕಾರ್ನಾಡ್ ಇವರ 'ಹಯವದನ', 'ತುಘಲಕ್' ಅಥವಾ ಬಿ.ವಿ.ಕಾರಂತರ ನಾಟಕಗಳು ಇಂದು ತಾಂತ್ರಿಕವಾಗಿ ರೆಕಾರ್ಡ್ ಆಗಿ, ಡಿಜಿಟಲ್ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಾ ಸಿನಿಮಾ ಪ್ರೇಕ್ಷಕರನ್ನೂ ರಂಗಭೂಮಿಯತ್ತ ಸೆಳೆಯುತ್ತಿವೆ. ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್, ಜಿಯೋಸಿನಿಮಾ ಮುಂತಾದ ಡಿಜಿಟಲ್

ಒಟಿಟಿ ವೇದಿಕೆಗಳ ಆಗಮನದಿಂದಾಗಿ, ರಂಗಭೂಮಿಯ 'ಸಣ್ಣ ಆಡಿಯನ್ಸ್' ಸಂಸ್ಕೃತಿಗೆ ವ್ಯಾಪಕ ಚಲನಚಿತ್ರ ಮಾರುಕಟ್ಟೆ ಲಭ್ಯವಾಗಿದೆ. ರಂಗಭೂಮಿಯಂತಹ ಪ್ರಾಯೋಗಿಕ ಮತ್ತು ವಿಷಯ-ಆಧಾರಿತ ಸಣ್ಣ ಬಜೆಟ್ ಸಿನಿಮಾಗಳಿಗೆ ಒಟಿಟಿ ದೊಡ್ಡ ವೇದಿಕೆಯಾಗಿದೆ. 'ವೆಬ್ ಸರಣಿ'ಗಳ ಸಂಸ್ಕೃತಿಯು ನಾಟಕದಂತೆಯೇ 'ಅಧ್ಯಾಯವಾರು' ಕಥೆ ಹೇಳುವ ಶೈಲಿಯನ್ನು ಹೊಂದಿರುವುದರಿಂದ, ರಂಗಭೂಮಿಯ ಬರಹಗಾರರಿಗೆ ಮತ್ತು ನಟರಿಗೆ ಚಿತ್ರರಂಗದಲ್ಲಿ ಹೊಸ ಅವಕಾಶಗಳ ಬಾಗಿಲು ತೆರೆದಿದೆ. ಸಮಕಾಲೀನ ಸಂದರ್ಭದಲ್ಲಿ ರಂಗಭೂಮಿ ಮತ್ತು ಚಲನಚಿತ್ರ ಮಾಧ್ಯಮಗಳು ಪರಸ್ಪರ ಸ್ಪರ್ಧಿಗಳಾಗದೆ, ಪರಸ್ಪರ ಶಕ್ತಿಯನ್ನು ಬಳಸಿಕೊಳ್ಳುವ ಸಾಂಸ್ಕೃತಿಕ ಸಂಗಮವಾಗಿ ಕಾರ್ಯನಿರ್ವಹಿಸುತ್ತಿವೆ. ರಂಗಭೂಮಿಯು ತನ್ನ 'ಆತ್ಮ ಮತ್ತು ನೈಜತೆಯನ್ನು ಸಿನಿಮಾಗೆ ನೀಡುತ್ತಿದ್ದರೆ, ಚಲನಚಿತ್ರವು ತನ್ನ 'ತಂತ್ರಜ್ಞಾನ ಮತ್ತು ತಲುಪುವಿಕೆಯನ್ನು' ರಂಗಭೂಮಿಯ ವಿಸ್ತರಣೆಗೆ ಬಳಸಿಕೊಳ್ಳಲು ದಾರಿ ಮಾಡಿಕೊಡುತ್ತಿದೆ.

**ಸವಾಲುಗಳು ಮತ್ತು ಭವಿಷ್ಯದ ದಾರಿ**

ಡಿಜಿಟಲ್ ತಂತ್ರಜ್ಞಾನ ಮತ್ತು ಜಾಗತೀಕರಣದ ಈ ಯುಗದಲ್ಲಿ ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ಮಾಧ್ಯಮಗಳೆರಡೂ ಅಭೂತಪೂರ್ವ ಸವಾಲುಗಳನ್ನು ಎದುರಿಸುತ್ತಿವೆ. ಈ ಎರಡೂ ಮಾಧ್ಯಮಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು, ಕಲಾತ್ಮಕ ಮೌಲ್ಯಗಳೊಂದಿಗೆ ಮುನ್ನಡೆಯಲು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು ಹಾಗೂ ಕಂಡುಕೊಳ್ಳಬೇಕಾದ ಪರಿಹಾರದ ದಾರಿಗಳು ಬಹಳಷ್ಟಿವೆ.

ವೃತ್ತಿ ಮತ್ತು ಹವ್ಯಾಸಿ ರಂಗತಂಡಗಳು ಆರ್ಥಿಕವಾಗಿ ತೀವ್ರ ಸಂಕಷ್ಟದಲ್ಲಿವೆ. ರಂಗಮಂದಿರಗಳ ಬಾಡಿಗೆ, ಬೆಳಕು-ಧ್ವನಿ ವ್ಯವಸ್ಥೆಯ ವೆಚ್ಚ ಮತ್ತು ಪ್ರಯಾಣದ ವೆಚ್ಚಗಳು ಗಗನಕ್ಕೇರಿವೆ. ಆದರೆ ಟಿಕೆಟ್ ದರವನ್ನು ಹೆಚ್ಚಿಸಿದರೆ, ಪ್ರೇಕ್ಷಕರು ದೂರವಾಗುವ ಭಯವಿದೆ. ಚಲನಚಿತ್ರ ಕ್ಷೇತ್ರವು ಇಂದು ಕೋಟಿಗಳ ವ್ಯವಹಾರವಾಗಿದೆ. ಸ್ಟಾರ್ ನಟರ ಅತಿಯಾದ ಸಂಭಾವನೆ ಮತ್ತು ಪ್ರಚಾರ ವೆಚ್ಚ ಹೆಚ್ಚಾಗಿರುವುದರಿಂದ, ರಂಗಭೂಮಿಯ ಮೂಲದಿಂದ ಬರುವ ನೈಜ ಮತ್ತು ಕಲಾತ್ಮಕ ಸಣ್ಣ ಬಜೆಟ್ ಸಿನೆಮಾಗಳಿಗೆ ಚಿತ್ರಮಂದಿರಗಳಲ್ಲಿ ಸೂಕ್ತ ಪ್ರದರ್ಶನ ಲಭಿಸುತ್ತಿಲ್ಲ. ಸ್ಮಾರ್ಟ್‌ಫೋನ್‌ಗಳ ಅತಿಯಾದ ಬಳಕೆ, ಶಾರ್ಟ್ ವೀಡಿಯೋಗಳು (ರೀಲ್ಸ್) ಮತ್ತು ಒಟಿಟಿ ವೇದಿಕೆಗಳು ಜನರ ಗಮನ ಹರಿಸುವ ಸಮಯವನ್ನು ಕಡಿಮೆ ಮಾಡಿವೆ. ಪ್ರೇಕ್ಷಕರು ಮನೆಯಿಂದ ಹೊರಬಂದು ನಾಟಕ ಮಂದಿರ ಅಥವಾ ಚಿತ್ರಮಂದಿರಕ್ಕೆ ಹೋಗಿ 2–3 ಗಂಟೆಗಳ ಕಾಲ ಒಂದೇ ಕಡೆ ಕುಳಿತು ವೀಕ್ಷಿಸುವ ತಾಳ್ಮೆ ಕಳೆದುಕೊಳ್ಳುತ್ತಿರುವುದು ರಂಗಭೂಮಿ ಹಾಗೂ ಬೆಳ್ಳಿಪರದೆ ಎರಡಕ್ಕೂ ದೊಡ್ಡ ಸವಾಲಾಗಿದೆ. ಬೆಂಗಳೂರು, ಮೈಸೂರು ಅಥವಾ ಹೆಗ್ಗೋಡಿನಂತಹ ಕೆಲವು ನಗರಪ್ರದೇಶಗಳನ್ನು ಹೊರತುಪಡಿಸಿದರೆ, ಕರ್ನಾಟಕದ ಹೆಚ್ಚಿನ ತಾಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಸುಸಜ್ಜಿತ ರಂಗಮಂದಿರಗಳಾಗಲಿ ಅಥವಾ ಸಾಂಸ್ಕೃತಿಕ ಚಿತ್ರಮಂದಿರಗಳಾಗಲಿ ಇಲ್ಲದಿರುವುದು ಕಲಾ ಪ್ರಸಾರಕ್ಕೆ ದೊಡ್ಡ ತಡೆಯಾಗಿದೆ. ಪ್ರಾಮಾಣಿಕ ಸಾಮಾಜಿಕ ಬದ್ಧತೆಗಿಂತ 'ಬಾಕ್ಸ್ ಆಫೀಸ್ ಕಲೆಕ್ಷನ್' ಮತ್ತು 'ವೈರಲ್ ಕಂಟೆಂಟ್'ಗಳಿಗೆ ಪ್ರಾಮುಖ್ಯತೆ ದೊರೆಯುತ್ತಿರುವುದರಿಂದ ಸಿನಿಮಾಗಳಲ್ಲಿ ಕಥೆಯ ಆಳ ಮತ್ತು ಸಾಹಿತ್ಯಿಕ ಮೌಲ್ಯಗಳು ಕುಸಿಯುತ್ತಿವೆ. ರಂಗಭೂಮಿಯ ಬೌದ್ಧಿಕ ಸಂಪತ್ತು ಕೇವಲ ಬೌದ್ಧಿಕ ವರ್ಗಕ್ಕಷ್ಟೇ ಸೀಮಿತಗೊಳ್ಳುವ ಆತಂಕವೂ ಎದುರಾಗಿದೆ.

ಈ ನಿಟ್ಟಿನಲ್ಲಿ ರಂಗಭೂಮಿ ಮತ್ತು ಚಲನಚಿತ್ರ ಮಾಧ್ಯಮ ಭವಿಷ್ಯದ ದಾರಿಯನ್ನು ಕಂಡುಕೊಳ್ಳಬೇಕಾದರೆ, ಸರ್ಕಾರವು 'ಕರ್ನಾಟಕ ನಾಟಕ ಅಕಾಡೆಮಿ' ಮತ್ತು 'ಚಲನಚಿತ್ರ

ಅಕಾಡೆಮಿ'ಗಳ ಮೂಲಕ ರಂಗತಂಡಗಳಿಗೆ ಮತ್ತು ಕಲಾತ್ಮಕ ಸಣ್ಣ ಬಜೆಟ್ ಸಿನಿಮಾಗಳಿಗೆ ನೀಡುವ ಸಬ್ಸಿಡಿಯನ್ನು ಹೆಚ್ಚಿಸಬೇಕು. ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಹವಾನಿಯಂತ್ರಿತ ಆಧುನಿಕ ತಂತ್ರಜ್ಞಾನ ಹೊಂದಿರುವ ಮಿನಿ ರಂಗಮಂದಿರಗಳನ್ನು ನಿರ್ಮಿಸಿ ಕಡಿಮೆ ದರದಲ್ಲಿ ರಂಗಕರ್ಮಿಗಳಿಗೆ ನೀಡಬೇಕು. ರಂಗಭೂಮಿಯು ಡಿಜಿಟಲ್ ತಂತ್ರಜ್ಞಾನಕ್ಕೆ ಹೆದರದೆ, ಅದನ್ನು ತನ್ನ ಲಾಭಕ್ಕೆ ಬಳಸಿಕೊಳ್ಳಬೇಕು. ನಾಟಕಗಳನ್ನು ಉನ್ನತ ಗುಣಮಟ್ಟದಲ್ಲಿ ರೆಕಾರ್ಡ್ ಮಾಡಿ ಡಿಜಿಟಲ್ ಆರ್ಕೈವ್‌ಗಳನ್ನು ಮಾಡುವುದು ಮತ್ತು ಸ್ಟ್ರೀಮಿಂಗ್ ವೇದಿಕೆಗಳ ಮೂಲಕ ಜಾಗತಿಕ ಪ್ರೇಕ್ಷಕರಿಗೆ ತಲುಪಿಸುವುದು ಅಗತ್ಯವಾಗಿದೆ. ಶಾಲಾ-ಕಾಲೇಜು ಮಟ್ಟದಲ್ಲೇ 'ರಂಗಶಿಕ್ಷಣ' ಮತ್ತು 'ಸಿನಿಮಾ ಸಾಕ್ಷರತೆ'ಯನ್ನು ಕಲಿಕೆಯ ಭಾಗವಾಗಿಸಬೇಕು. ಇದರಿಂದ ಮುಂದಿನ ಪೀಳಿಗೆಯಲ್ಲಿ ಉತ್ತಮ ಕಲಾ ಪ್ರೇಕ್ಷಕರು ಮತ್ತು ವಿಮರ್ಶಕರು ರೂಪುಗೊಳ್ಳಲು ಸಾಧ್ಯವಾಗುತ್ತದೆ. ತಮ್ಮ ಸ್ಥಳೀಯ ಜಾನಪದ, ಪೌರಾಣಿಕ ಮತ್ತು ಪ್ರಾದೇಶಿಕ ಕಥೆಗಳನ್ನು ಆಧುನಿಕ ಸಂವೇದನೆಗೆ ತಕ್ಕಂತೆ ಪುನರ್ ಸೃಷ್ಟಿಸಬೇಕು.

ಒಟ್ಟಾರೆಯಾಗಿ ಕನ್ನಡ ಸಾಂಸ್ಕೃತಿಕ ಚರಿತ್ರೆಯನ್ನು ಅವಲೋಕಿಸಿದಾಗ, ರಂಗಭೂಮಿ ಮತ್ತು ಚಲನಚಿತ್ರ ಮಾಧ್ಯಮಗಳು ಒಂದನ್ನೊಂದು ಪೋಷಿಸುತ್ತಾ, ಬೆಳೆದ ಅಪೂರ್ವ ಸಹಜೀವನದ ಪಯಣ ನಮಗೆ ಕಾಣಸಿಗುತ್ತದೆ. ರಂಗಭೂಮಿಯು ತನ್ನ ತತ್ವಜ್ಞಾನ, ರಂಗಶಿಸ್ತು, ಸಾಹಿತ್ಯಿಕ ಶ್ರೀಮಂತಿಕೆ ಮತ್ತು ಶ್ರೇಷ್ಠ ಕಲಾವಿದರನ್ನು ನೀಡುವ ಮೂಲಕ ಕನ್ನಡ ಚಿತ್ರರಂಗದ 'ಆತ್ಮ' ಅಥವಾ 'ಬೇರು' ಆಗಿ ಕಾರ್ಯನಿರ್ವಹಿಸಿದೆ. ಇತ್ತ ಚಲನಚಿತ್ರ ಮಾಧ್ಯಮವು ತಂತ್ರಜ್ಞಾನದ ವೈಭವ ಮತ್ತು ವಿಶಾಲ ವ್ಯಾಪ್ತಿಯ ಮೂಲಕ ಆ ಕಲಾತ್ಮಕ ಕಲ್ಪನೆಗಳಿಗೆ 'ರೆಂಬೆ-ಕೊಂಬೆ'ಯಾಗಿ ಜಾಗತಿಕ ಮಟ್ಟದಲ್ಲಿ ರೆಕ್ಕೆ ಚಾಚಲು ನೆರವಾಗಿದೆ. ವೃತ್ತಿರಂಗಭೂಮಿಯ ಗುಬ್ಬಿ ವೀರಣ್ಣನವರ ಯುಗದಿಂದ ಆರಂಭವಾಗಿ, ನವ್ಯ ಕಾಲಘಟ್ಟದ ಬಿ.ವಿ.ಕಾರಂತ, ಗಿರೀಶ್ ಕಾರ್ನಾಡ್ ಅವರ ಸಮಾಂತರ ಸಿನಿಮಾಗಳ ಮೂಲಕ ಹಾದು, ಇಂದಿನ ನವೀನ ಡಿಜಿಟಲ್ ಯುಗದವರೆಗೆ ಇವೆರಡೂ ಮಾಧ್ಯಮಗಳು ಪರಸ್ಪರ ಪ್ರಭಾವಿಸುತ್ತಲೇ ಬಂದಿವೆ. ತಂತ್ರಜ್ಞಾನ ಎಷ್ಟೇ ಮುಂದುವರಿದರೂ ಜೀವಂತ ಮಾನವೀಯ ಸಂವೇದನೆಗೆ ಪರ್ಯಾಯವಿಲ್ಲ. ರಂಗಭೂಮಿಯ 'ನೇರ ಜೀವಂತಿಕೆ' ಹಾಗೂ ಸಿನಿಮಾದ 'ದೃಶ್ಯ ತಾಂತ್ರಿಕತೆ' ಒಂದಾದಾಗ ಮಾತ್ರ ಕನ್ನಡ ಸಂಸ್ಕೃತಿಯು ಜಾಗತಿಕ ವೇದಿಕೆಯಲ್ಲಿ ತನ್ನ ಅನನ್ಯತೆಯನ್ನು ಕಾಯ್ದುಕೊಳ್ಳಲು ಸಾಧ್ಯ. ಈ ಎರಡೂ ಮಾಧ್ಯಮಗಳನ್ನು ಕೇವಲ ಉದ್ಯಮವಾಗಿ ನೋಡದೆ, ನಾಡಿನ ಸಾಂಸ್ಕೃತಿಕ ಮತ್ತು ವೈಚಾರಿಕ ಅಸ್ಮಿತೆಯಾಗಿ ಉಳಿಸಿ ಬೆಳೆಸುವುದು ಇಂದಿನ ತುರ್ತು ಅಗತ್ಯವಾಗಿದೆ.

## ಪರಾಮರ್ಶನ ಗ್ರಂಥಗಳು:


1. ನೀನಾಸಂ ಸುಬ್ಬಣ್ಣ, (1991), ಲೇಖನ (ಪ್ರಜಾವಾಣಿ ಪತ್ರಿಕೆ), ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ.
2. ಗಿರೀಶ್ ಕಾರ್ನಾಡ್, (2008), ರಂಗಪ್ರಸಂಗ ಮತ್ತು ಸಿನಿಮಾ, ಧಾರವಾಡ: ಮನೋಹರ ಗ್ರಂಥಮಾಲಾ.
3. ವೆಂಕಟರಾಮ್ ಎನ್. ಎಸ್., (2012), ನವಕರ್ನಾಟಕ ಕೈಪಿಡಿ ರಂಗಭೂಮಿ, ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್.
4. ಕುಮಾರಸ್ವಾಮಿ ಎಚ್. ಎಂ., (2017), ಕರಾವಳಿ ಕನ್ನಡ ರಂಗಭೂಮಿ, ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ.
5. ರಂಗನಾಥ್ ಎಚ್. ಕೆ., (2024), ಕರ್ನಾಟಕ ರಂಗಭೂಮಿ, ಬೆಂಗಳೂರು: ಹೇಮಂತ್ ಸಾಹಿತ್ಯ ಪ್ರಕಾಶನ.